THE KARNATAKA CONTINGENCY FUND (AMENDMENT) BILL, 1681.

MOTION TO CONSIDER

SRI. M. VEERAPPA MOILY (Minister for Finance),— Sir, I move.

"that the Karnataka Contingency Fund (Amendment) Bill 1981 be taken into consideration."

The question was proposed

SRI A. LAKSHMI SAGAR.— According to my submission this Contingency Bill requires some time for study. Therefore, I do not think we will be able to complete this Bill within 15 minutes that are at our disposal. Therefore, my submission is that it may be taken up on Monday.

ಶ್ರೀ ಎಂ. ವೀರಪ್ಪಮೊಯಿಲಿ, — ಒಂದೂವರೆ ಗಂಟೆವರೆಗೂ ಕುಳಿತುಕೊಂಡು ಪಾಸ್ ಮಾಡಿ ಕೊಡಿ.

SRI D. DEVARAJ URS.— There are two points. Hon. Member Sri Lakshmisagar wants sufficient time to discuss this contingent bill. Hon. Minister says that we will sit up to 1.30 and pass it. There is some difference between what hon. member says and what the Government says, If it is a matter which could be taken up also on Monday then you can start now. Let the hon. Member commence his speech on the Bill.

CHAIRMAN.— Extension beyond 1'o clock could be done only if both sides agree.

SRI D. DEVARAJ URS.—Even by extension by half an hour I do not think we can finish. Therefore let hon. member Sri Lakshmisagar start his speech. Then after 1'o clock we can adjourn the House and take up the Bill on Monday for discussion.

ಛೇರ್ಮನ್.—ತಾವು ಶುರು ಮಾಡುವುದಕ್ಕೆ ಮುಂಚಿತವಾಗಿ ಮಾನ್ಯ ಮಂತ್ರಿಗಳು ಈ ಬಿಲ್ ಸಂಬಂಧವಾಗಿ ಏನು ಹೇಳುತ್ತಾರೋ ಕೇಳೋಣ.

ಶ್ರೀ ಎ. ಲಕ್ಷ್ಮೀಸಾಗರ್.— ಯಾರೋ ಬರೆದಿರುವುದನ್ನು ತೆಗೆದುಕೊಂಡುಬಂದು ನಾಲ್ಕು ಮಾತನ್ನು ಹೇಳಿಬಿಡುತ್ತಾರೆ.

ಶ್ರೀ ಎಂ. ವಿರಪ್ಪಮೊಯ್ಲಿ.—ನಾನು ಹೇಳಿಬಿಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಕಂಟಿಂಜೆನ್ಸಿ ಫಂಡ್ ೨೮ ಕೋಟಿ ರೂಪಾಯಿಗಳವರೆಗೆ ಇತ್ತು. ಈ ಮಸೂದೆ ಪ್ರಕಾರ ಅದನ್ನು ೩೫ ಕೋಟಿ ರೂಪಾಯಿಗಳಿಗೆ ವಿಸ್ತರಿಸಬೇಕು ಎಂದು ಈ ಮಸೂದೆಯನ್ನು ತಂದಿದ್ದೇವೆ. ಪ್ರಾಮುಖ್ಯವಾಗಿ ಒರಿಜನಲ್ ಬಜೆಟ್‌ನಲ್ಲಿ ಸೇರಿಸಿಕೊಳ್ಳಲಾಗದಂಥ ಮತ್ತು ನಿರೀಕ್ಷಣೆ ಮಾಡದಂಥ ಯಾವ ಒಂದು ಖರ್ಚು ಬರುತ್ತದೆ ಆದನ್ನು ವಿಸ್ತರಿಸುವ ಸಲುವಾಗಿ ಈ ಕಂಟಿಂಜೆನ್ಸಿ ಫಂಡ್‌ನಲ್ಲಿ ಆಳವಡಿಸಿದ್ದೇವೆ. ಇದರಲ್ಲಿ ಅನೇಕ ಐಟಂಗಳು ಅವಶ್ಯಕತೆಯನ್ನು ಉಂಟುಮಾಡಿವೆ. ಇದರಲ್ಲಿ ಪ್ರಮುಖವಾದ ಕೆಲವೇ ವಿಚಾರಗಳನ್ನೇ ನಾನು ಈ ಸಭೆಯ ಮುಂದಿಡಬೇಕಾದರೆ, ಮೈಸೂರು ಪೇಪರ್ ಮಿಲ್ಲಿನಲ್ಲಿ ಸುಮಾರು ೫ ಕೋಟಿ ರೂಪಾಯಿಗಳನ್ನು ನಾವು ವಿಶೇಷವಾಗಿ ಖರ್ಚು ಮಾಡಬೇಕಾದಂಥ ಪ್ರಮೇಯ ಬಂತು.

ಮತ್ತೆ ಹೊಸ್ಮನೆಯರ ತಾಲ್ಲೂಕ್‌ನಲ್ಲಿ ನೆರೆ ಬಂದ ವಿಚಾರದಲ್ಲಿ ವಿಶೇಷವಾದಂಥ ಖರ್ಚು ಬಂತು. ಬಹುತೇಕ ಈ ವಿಚಾರಗಳೆಲ್ಲಾ ಬಜೆಟ್ಟಿನ ಸಂಬಂಧದಲ್ಲಿ ಯಾವ ಊಹೆಗೂ ನಿಲುಕದಂಥ ವಿಚಾರಗಳು. ಮತ್ತೆ ಆಕಸ್ಮಾತ್ತಾಗಿ ಬಂದಂಥ ಪ್ರವಾಹ ಏನಿದೆ ಅದಕ್ಕಾಗಿ ವಿಶೇಷವಾಗಿ ಖರ್ಚನ್ನು ಮಾಡಬೇಕಾದಂಥ ಅವಶ್ಯಕತೆ ಕೂಡ ಬಂತು. ಮತ್ತೆ ಕಾಸ್ಟ್ ಆಫ್ ಲೆವಿ ಶುಗರ್ ವಿಚಾರ. ತಮಗೆ ಗೊತ್ತಿದೆ, ಲೆವಿ ಶುಗರ್ ವಿಚಾರದಲ್ಲಿ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟ್‌ಗೆ ನಾವು ರೀ ಎಂಬರ್ಸ್‌ಗಾಗಿ ಸುಮಾರು ೬ ಕೋಟಿ ರೂಪಾಯಿಗಳನ್ನು ಅನೇಕ ಸಂದರ್ಭದಲ್ಲಿ ಕೊಡಬೇಕಾಗಿ ಬಂತು, ಇದು ಕೂಡ ಹೈಕೋರ್ಟಿನಲ್ಲಿ ಆದಂಥ ವಿವಾದದ ಫಲ. ಆಮೇಲೆ ಫಾರ್ಮರ್ಸ್ ಅಜಿಟೇಷನ್ ತಮಗೆ ಗೊತ್ತಿದೆ. ಕೋರ್ಟ್ ಸ್ಟೇ ಕೊಟ್ಟ ಕಾರಣ ಎಲ್ಲಾ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟೀವ್ ಬ್ಯಾಂಕ್‌ಗಳಿಗೆ ವಸೂಲಾತಿ ಆಗಲಿಲ್ಲ. ಆ ಕಾರಣದಿಂದ ರಿಸರ್ವ್ ಬ್ಯಾಂಕ್‌ಗೆ ಡಿಫಾಲ್ಟ್ ಆಗಬೇಕಾದಂಥ ಸಂದರ್ಭ ಬಂದಾಗ ಆ ಒಂದು ಆಘಾತವನ್ನು ಸಹಿಸಲಿಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಿಂತಲೂ ಬೆಚ್ಚಿಗೆ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್‌ಗಳಿಗೆ ಕೊಡಬೇಕಾದಂಥ ವಿಶೇಷ ಪ್ರಸಂಗ ಬಂತು. ೧೯೮೦-೮೧ನೇ ಸಾಲಿನಲ್ಲಿ ಇದು ಹೆಚ್ಚಾದ ಕಾರಣ, ೨೦ ಕೋಟಿ ರೂಪಾಯಿಗಳಿಂದ ೩೫ ಕೋಟಿ ರೂಪಾಯಿಗಳಿಗೆ ವಿಸ್ತರಿಸಬೇಕಾದ ಒಂದು ವಿಶೇಷ ಪ್ರಸಂಗ ಬಂದಿದ್ದರಿಂದ ಈ ಪುಸೂದೆಯನ್ನು ನಾವು ಈ ಸದನದಲ್ಲಿ ಮಂಡಿಸಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಕಂಟಿಂಜೆನ್ಸಿ ಫಂಡನ್ನು ೨೦ ರಿಂದ ೩೫ ಕೋಟಿ ರೂಪಾಯಿಗಳಿಗೆ ವಿಸ್ತರಣೆ ಮಾಡುವುದಕ್ಕೆ ಈ ಪುಸೂದೆಯನ್ನು ತಂದಿದ್ದೀರಿ. ಈ ಫಂಡನ್ನು ಖರ್ಚುಮಾಡಿಕೊಂಡು ಬಂದಿರುವುದು ಒಂದಾದರೆ, ಸಪ್ಲಿಮೆಂಟರಿ ಬಜೆಟ್ ಮಾಡುವಾಗ ಇದನ್ನು ಮಾಡಬಹುದಾಗಿತ್ತಲ್ಲ. ಓವರ್ ಅಂಡ್ ಏಬವ್ ೨೦ ಕೋಟಿ ರೂಪಾಯಿಗಳಿತ್ತು. ಕೆಲವು ಅನಿರೀಕ್ಷಿತವಾಗಿ ಬಂದಂಥ ವಿಷಯಗಳಿಗೆ ಬಜೆಟ್‌ನಲ್ಲಿ ಪ್ರಾವಿಜನ್ಸ್ ಇರುವುದಿಲ್ಲ. ಅದಕ್ಕೆ ಏನು ಮಾಡಬೇಕು ಎನ್ನುವುದು ನಿಮಗೆ ಗೊತ್ತಿದೆ. ಸಪ್ಲಿಮೆಂಟರಿ ಬಜೆಟ್ ತರುತ್ತೀರಾ ?

SRI M. VEERAPPA MOILY.—Subsequently we are going to do that.

ಶ್ರೀ ಡಿ. ದೇವರಾಜ ಅರಸ್.—ಇದನ್ನು ೩೫ ಕೋಟಿ ಮಾಡಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕವರ್ ಮಾಡಬಹುದಿತ್ತಲ್ಲ. ಆರ್ಡಿನೆನ್ಸ್ ತರುವ ಅಗತ್ಯ ಇರುತ್ತಾ ಇರಲಿಲ್ಲ. ಸಬ್‌ಸ್ಟಿಕ್ಟೈಂಟಾಗಿ ಹಿಂದೆ ಖರ್ಚು ಮಾಡಿರುವುದಕ್ಕೆ ಸಪ್ಲಿಮೆಂಟರಿ ಬಜೆಟ್ ತರುತ್ತೀರಿ. ಅಧಿಕಾರಿಗಳನ್ನು ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧಿಕಾರಿಗಳನ್ನು ಕೇಳೇ ತಂದಿದ್ದ.

ಶ್ರೀ ಡಿ. ದೇವರಾಜ ಅರಸ್.—ಅದೂ ಅಲ್ಲದೆ, ಅವ್ವ ಹೇಳಿದ ಹಾಗೆ ಕೇಳೋ ಅವ್ವಬಡ್ಡಿಯೆಂದರೆ ಒಂದು ಗಾದೆ ಇದೆ.

ಈಗ ಫ್ಲಡ್ ಬಂದಿದ್ದರೆ, ಡ್ರೌಟ್ ಬಿರಿಯೊಗಳಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವಿದೆ ಆ ರೀತಿ ಹಣವನ್ನು ಖರ್ಚು ಮಾಡಿದರೂ ಸಹ ಅದಕ್ಕೆ ಒಂದು ಸಪ್ಲಿಮೆಂಟರಿ ಬಜೆಟ್ ತಂದು ಪಾಸ್ ಮಾಡಿಕೊಳ್ಳುವುದಕ್ಕೂ ಸಹ ಅವಕಾಶವಿದೆ. ಅದನ್ನು ಬಿಟ್ಟು ಇವತ್ತು ಕನ್‌ಟಿನ್‌ಜೆನ್ಸಿ ಫಂಡ್‌ನಲ್ಲಿ ೨೦ ಕೋಟಿ ಇರುವುದನ್ನು ೩೦ ಕೋಟಿಗೆ ಏರಿಸುವ ಅಗತ್ಯವೇನಿತ್ತು ಎಂಬುವರ ಬಗ್ಗೆ ದಯವಿಟ್ಟು ನಮಗೆ ಸಮಾಧಾನ ಹೇಳಬೇಕಾಗುತ್ತದೆ, ಇಲ್ಲದಿದ್ದರೆ.....

ಶ್ರೀ ಎಂ. ವೀರಪ್ಪ ಮೊಯಿಲಿ.—ಕನ್‌ಟಿನ್‌ಜೆನ್ಸಿ ಫಂಡ್ ಏನೂ ಹೊಸದಲ್ಲ. ಅರ್ಜೆಂಟ್ ಪೇಮೆಂಟ್ಸ್‌ನ್ನು ಕೆಲವಕ್ಕೆ ಮಾಡಲೇಬೇಕಾಗಿ ಬರುತ್ತದೆ, ಆದಕ್ಕೆ ನಾವು ಇದರಿಂದ ಹಣವನ್ನು ಉಪಯೋಗ ಮಾಡಲೇಬೇಕಾಗುತ್ತದೆ.

SRI D. DEVARAJ URS.—I say, even in respect of any urgent expenditure which the Government has to face, it can provide funds and then bring it in the form of supplementary budget. It is not as if enunciating some new theory here. It is not necdessary that contingent fund itself should be raised

ಶ್ರೀ ಎಂ. ವೀರಪ್ಪ ಮೊಯ್ಲಿ.—ಎರಡು ವಿಧಾನಗಳು ಇವೆ. ಆದರಲ್ಲಿ ಯಾವುದನ್ನಾದರೂ ಸರ್ಕಾರ ಉಪಯೋಗಿಸಿಕೊಳ್ಳಬಹುದಾಗಿದೆ. ಆರ್ಜೆಂಟ್ ಆಗ ಇದನ್ನು ಜಾರಿಗೆ ತರಬೇಕಾಗಿದೆ. ಹೊಸದೇನೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಹೊಸದೇನೂ ಇಲ್ಲ ಎಂದು ಗೊತ್ತಿದೆ. ನೀವು ಮಾಡುವ ಕೆಲಸಗಳನ್ನೇ ಇದೇ ರೀತಿ ಮಾಡಿಕೊಂಡು ಬಂದಿದ್ದೀರಿ. ನಾವು ಈಗ ಮಾಡುತ್ತಿರುವುದು ಹೊಸದು, ಸರಿಯಾಗಿದೆಯೆಂದು ನೀವು ಅಭಿಪ್ರಾಯ ಪಡುವೆದಾದರೆ, ನಾವು ಸರಿಯಿಲ್ಲ ಎಂದು ಹೇಳುವುದನ್ನು ಹೇಳಲೇಬೇಕಾಗುತ್ತದೆ.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜನಗರ).—ಉಪಾಧ್ಯಕ್ಷರೇ, ಈ ಬಿಲ್ಲಿನಲ್ಲಿ, "It is considered necessary to increase of the co pus of the Contingency Fund" ಆದರೆ ಸರ್ಕಾರ ಎಲ್ಲಾ ಖರ್ಚು ವೆಚ್ಚಗಳನ್ನೂ ಸಹ ಆಯಾಯಾ ಇಲಾಖೆಗಳ ಹೆಸರಿನಲ್ಲಿ ಖರ್ಚು ಮಾಡಲಿಕ್ಕೆ ಅವಕಾಶವಿದೆ. ಈಗ ಫ್ಲಡ್ಸ್ ಬರುತ್ತದೆ ಡ್ರೌಟ್ ಬರುತ್ತದೆ ಅಂಥಾ ಸಮಯದಲ್ಲಿ ಎಕ್ಸ್‌ಸ್ ಆಗಿ ಹಣವನ್ನು ಖರ್ಚು ಮಾಡುತ್ತಾರೆ, ಇಲ್ಲವೆಂದು ಅಲ್ಲ. ಆದರೆ ಫ್ಲಡ್ಸ್‌ನ್ನು ಕಂಟ್ರೋಲ್ ಮಾಡಿ ಅದಕ್ಕೆ ಹಣವನ್ನು ಪಿ. ಡಬ್ಲ್ಯು. ಡಿ. ಇಲಾಖೆಯ ಮುಖಾಂತರ ಖರ್ಚು ಮಾಡುವುದಕ್ಕೆ ಸಾಧ್ಯತೆ ಇದೆ. ಪ್ರತಿಯೊಂದು ಸಹ ಒಂದೊಂದು ಇಲಾಖೆಯ ವ್ಯಾಪ್ತಿಯೊಳಗೆ ಖರ್ಚು ಮಾಡುವುದಕ್ಕೆ ಬರುತ್ತದೆ. ಅಂಥಾದ್ದರಲ್ಲಿ ಎಕ್ಸ್‌ಸ್ ಆಗಿ ಕನ್‌ಟಿನ್‌ಜೆನ್ಸಿ ಫಂಡ್‌ನಿಂದಲೇ ಖರ್ಚು ಮಾಡಬೇಕಾದಂಥ ಅವಶ್ಯಕತೆ ಏನು ಇತ್ತು ಎಂಬುದು ಅರ್ಥವಾಗುತ್ತಿಲ್ಲ. ಒಂದೊಂದು ಇಲಾಖೆಗೆ ಇಷ್ಟಿಷ್ಟು ಹಣವನ್ನು ಖರ್ಚು ಮಾಡಬೇಕೆಂದು ಕೊಟ್ಟಿರುತ್ತದೆ ಒಂದು ವೇಳೆ ಅದಕ್ಕಿಂತ ಹೆಚ್ಚಿಗೆ ಖರ್ಚು ಮಾಡಬೇಕಾಗಿ ಬಂದಂಥ ಸಮಯದಲ್ಲಿ ಅನ್‌ಫೋರ್ಸೀಸ್ ಆಗಿ ಏನು ಹಣ ಖರ್ಚಾಗಿರುತ್ತದೆ ಅದನ್ನು ಅಪ್ರೊಪ್ರಿಯೇಷನ್ ಅಕೌಂಟ್ಸ್‌ನಲ್ಲಿ ಇಟ್ಟಿದ್ದಂಥ ಹಣವನ್ನು ಇನ್ನು ಯಾವುದೇ ಡಿಪಾರ್ಟ್‌ಮೆಂಟಿನಲ್ಲಿಟ್ಟಿರುವ ಹಣವನ್ನು ತೆಗೆದುಕೊಂಡು ಖರ್ಚು ಮಾಡಲಾಗುತ್ತದೆ. ಆನಂತರ ಅದನ್ನು ಒಪ್ಪಿಗೆಗಾಗಿ ಇಲ್ಲಿ ಪಾಸ್ ಮಾಡಲು ತರುತ್ತೀರಿ. ಹೀಗಿರುವಾಗ ಆಕಸ್ಮಿಕವಾಗಿ ಖರ್ಚು ಮಾಡಲೆಂದು ಕನ್‌ಟಿನ್‌ಜೆನ್ಸಿ ಫಂಡ್‌ನಲ್ಲಿ ೨೦ ಕೋಟಿ ರೂಪಾಯಿಗಳನ್ನು ಇಡಲಾಗಿದೆ, ಅದು ಸಾಲದೆಂದು ಈಗ ೩೦ ಕೋಟಿ ರೂಪಾಯಿಗಳಿಗೆ ಹೆಚ್ಚಿಸಿದ್ದೀರಿ. ಇಷ್ಟೊಂದು ಅನ್‌ಫೋರ್ಸೀನ್ ಆಗಿ ಖರ್ಚು ಮಾಡಬೇಕಾದಂಥ ಪ್ರಸಂಗ ನಮ್ಮ ರಾಜ್ಯದಲ್ಲಿ ಏನೂ ಬಂದಿಲ್ಲ, ಬರಲಾರದೆಂದು ನನ್ನ ಭಾವನೆ.

೧೯೫೬ ನೇ ಇಸ್ವಿಯಿಂದ ಕನ್‌ಸಾಲಿಡೇಟೆಡ್ ಫಂಡ್‌ನಲ್ಲಿ ೨೦ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡೇ ಖರ್ಚು ಮಾಡಿಕೊಂಡು ಬಂದಿದ್ದಾರೆ. ಅನ್‌ಫೋರ್ಸೀನ್ ಆಗಿ ಬರುತ್ತಿದ್ದ ಸಮಸ್ಯೆಗಳನ್ನೆಲ್ಲಾ ಬಗೆಹರಿಸಿಕೊಂಡು ಬಂದಿದ್ದಾರೆ ಅಂಥಾದ್ದರಲ್ಲಿ ಈಗ ೧೯೮೧ರಲ್ಲಿ ಏನು ಅಂಥಾ ಹೊಸದಾಗಿ ಏನೂ ಕಾಣದೇ ಇದ್ದಂಥ ಅನ್‌ಫೋರ್ಸೀನ್ ಬಂದಿದೆ ? ಆದುದರಿಂದ ಇದನ್ನು ಹೆಚ್ಚಿಸುವ ಅಗತ್ಯವಿಲ್ಲವೆಂದು ನನ್ನ ಭಾವನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳವರು ಈ ಬಿಲ್ಲಿನಲ್ಲಿ ಈ ರೀತಿಯಾಗಿ ಹೇಳಿದ್ದಾರೆ, "New Service" items not contemplated in the original budget estimates" ೬ ತಿಂಗಳ ಕಾಲದೊಳಗಾಗಿ ಈ ಶಾಸನ ಸಭೆಯನ್ನು ಕರೆಯುವುದಕ್ಕೆ ಪ್ರಯತ್ನ ಪಡಲಿಲ್ಲ. ಇನ್ನು ಏನು ೬ ತಿಂಗಳು ಮುಗಿದು ಹೋಗಿ ಬಿಡುತ್ತದೆ ಎನ್ನುವಾಗ ಆರ್ಜೆಂಟ್ ಆಗಿ ಇದು ಪಾಸ್ ಮಾಡಿ ಕೊಡಬೇಕಾಗಿದೆ ಎಂದು ಕೇಳುತ್ತಾರೆ. ಮಾನ್ಯ ಶ್ರೀ ಗಂಗಾಧರ್ ರವರು ಹೇಳಿದ ಹಾಗೆ ಕನ್‌ಟಿನ್‌ಜೆನ್ಸಿ ಫಂಡಲ್ಲಿ ೨೦ ಕೋಟಿ ರೂಪಾಯಿಗಳಿದ್ದರೂ ಸಹ ಇದು ಸಾಲದು ೩೦ ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಈಗ ಈ ಬಿಲ್ಲನ್ನು ತಂದಿದ್ದಿರಲ್ಲಾ, ಅಂಥಾ ಎಮರ್ಜೆನ್ಸಿ ಏನು ಉಂಟಾಗಿದೆ ? "ನ್ಯೂ ಸರ್ವಿಸ್" ಐಟಿಮ್ಸ್ ಎಂದರೆ ಯಾವುವು ಎಂಬುದನ್ನು ದಯವಿಟ್ಟು ಹೇಳಿದರೆ ನಮಗೆ ಸ್ವಲ್ಪ ಎನ್‌ಲೈಟ್ ಮಾಡಿದ ಹಾಗಾಗುತ್ತದೆ. ಇಲ್ಲದಿದ್ದರೆ ನಮಗೆ ಏನೂ ಗೊತ್ತಾಗುವುದಿಲ್ಲ. ಆದುದರಿಂದ ಈ ಒಂದು ವಿಷಯವನ್ನು ತಾವು ಕ್ಲಾರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಮೂರ್ತಿ.—ಮಾನ್ಯ ಗಂಗಾಧರ್‌ರವರು ಹೇಳಿದ ಹಾಗೆ ಪ್ರತಿವರ್ಷವೂ ಬಜೆಟ್‌ಗಳಲ್ಲೂ ಕೂಡ ಆಯಾಯಾ ಇಲಾಖೆಗಳ ಕೆಳಗೆ ಖರ್ಚು ಮಾಡುವುದಾಗಿದೆ, ಹೆಸ್ಕಾ ಕಡೆಯವರಾಗಲೀ ಕೂಡ

ಅಪ್ರೈಪ್ರಿಯೇಷನ್ ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ನಮ್ಮ ಲೀಡರ್‌ರವರು ಸಹ ಹೇಳಿದ್ದಾರೆ. ಆದುದರಿಂದ ಇಲ್ಲಿ ಅನ್‌ಫೋರ್ಸೀನ್ ಎಂದರೆ ನನ್ನ ಮನಸ್ಸಿಗೆ ಬರುವುದನ್ನು ಹೇಳುತ್ತೇನೆ ದಯವಿಟ್ಟು ಮಾನ್ಯ ಮಂತ್ರಿಗಳವರು ತಪ್ಪಾಗಿ ತಿಳಿದುಕೊಳ್ಳಬಾರದು. ಈ ಸನ್ಮಾನ ಸಮಾರಂಭಗಳು ನಡೆಯುತ್ತದೆ, ಆಗ ಏಕದಂ ಹಣವನ್ನು ೨ ಲಕ್ಷ, ೩ ಲಕ್ಷ ಕೊಡಬೇಕಾಗಿ ಬರುತ್ತದೆ, ಅಂಥಾದ್ದಕ್ಕೆ ಅವಕಾಶವಾಗಲಿ ಎಂದು ಏನಾದರೂ ಈಗ ಜಾಸ್ತಿ ಮಾಡುತ್ತೀದ್ದೀರಾ ಎನ್ನುವ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎ. ಕೆಂಗೇಗೌಡ.—ಇವರ ಮಾದ ಸರಣಿಯನ್ನು ನೋಡಿದರೆ ಕಂಟಿಂಜನ್ಸಿ ಫಂಡನ್ನು ಕ್ಯಾನ್ಸಲ್ ಮಾಡಿ ಅಪ್ರೈಪ್ರಿಯೇಷನ್ ಬಿಲ್ ಮತ್ತು ಸಪ್ಲಿಮೆಂಟರಿ ಬಿಲ್ಲನ್ನು ಮಾಡಿಕೊಳ್ಳುವ ವಾದಕ್ಕೆ ಇಳಿದಿದ್ದಾರೆಂಬ ರೀತಿಯಲ್ಲಿ ಕಾಣುತ್ತಿದೆ.

ಛೇರ್ಮನ್.—ವರ್ಷೇ ವರ್ಷೇ ಆಯವ್ಯಯ ಜಾಸ್ತಿಯಾದ ಹಾಗೆ ಕಂಟಿಂಜನ್ಸಿ ಗಾತ್ರವೂ ಜಾಸ್ತಿಯಾಗಿರಬಹುದು. ಅದನ್ನೆಲ್ಲ ಮಾನ್ಯ ಮಂತ್ರಿಗಳು ಹೇಳುತ್ತಾರೆ ನಮಗೆ ನಿಮಗೆ ಏತಕ್ಕೆ ಆ ತೊಂದರೆ ?

ಈಗ ಸಭೆಯು ಮುಂದೂಡುವುದು ಸೋಮವಾರ ಮಧ್ಯಾಹ್ನ ಒಂದು ಗಂಟೆಗೆ ಸೇರುವುದು.

The House adjourned at One of the Clock to meet again at one of the Clock on Monday, 9th March 1981.